ಈ ದಿನ ದಿನಾಂಕಃ 16.04.2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>

5. ನನಗೆ ಕನ್ನಡ ಓದಲು ಬರುತ್ತದೆ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಅಕ್ಷರಗಳು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಆ ಪತ್ರದಲ್ಲಿ ಕಾಣಿಸಿರುವ ಸೌಬ್ಯಾಗ್ಯಮ್ಮ ಕೋಂ ರುದ್ರಮುನಿಯಪ್ಪ ಯಾರೆಂದು ನನಗೆ ಗೊತ್ತಿಲ್ಲ. ಮಂಟರಘಟ್ಟದ ಎಂ ರೇವಣಸಿದ್ದಪ್ಪ ಮತ್ತು ಅವರ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರೆಲ್ಲರೂ ಸೇರಿ ಸರ್ವೆ ನಂ.94/2 ರ ಪೈಕಿ ಉತ್ತರ ದಿಕ್ಕಿನ 2 ಎಕರೆ ಜಮೀನನ್ನು ಸೌಬ್ಯಾಗ್ಯಮ್ಮನವರಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿಯವರ ಕ್ರಯಪತ್ರ ದಿಃ 19.02.1973 ರಲ್ಲಿ ಚನ್ನಗಿರಿಯ ಉಪನೊಂದಣಾದಿಕಾರಿ ಕಚೇರಿಯಲ್ಲಿ ನೊಂದಾಗಿರುತ್ತದೆ ಎಂದರೆ ಸರಿಯಲ್ಲ. ಆ ಪತ್ರದಂತೆ ಸರ್ವೆ ನಂ.94/2 ರ ಒಟ್ಟು 10 ಎಕರೆ ಪೈಕಿ ಉತ್ತರ ಬಾಗದ ಪಶ್ಚಿಮದ 3 ಎಕರೆ 36 ಗುಂಟೆ ಜಮೀನನ್ನು ಸಹ ಸೌಬ್ಯಾಗ್ಯಮ್ಮನವರು ಖರೀದಿಸಿದ್ದಾರೆಂದರೆ ಸರಿಯಲ್ಲ. ಸದರಿ ಖರೀದಿ ಪತ್ರದಂತೆ ಸರ್ವೆ ನಂ.94/1 ರಲ್ಲಿ ಸೌಬ್ಯಾಗ್ಯಮ್ಮನವರಿಗೆ 2 ಎಕರೆಗೆ ಹಕ್ಕು ಪ್ರಾಪ್ತವಾಗಿದೆ ಎಂದರೆ ಸರಿಯಲ್ಲ.

6. ಪಾರ್ವತಮ್ಮ ನನ್ನ ಅತ್ತೆ. ಆಕೆ ಮರಣ ಹೊಂದಿರುತ್ತಾರೆ. ಸೌಬ್ಯಾಗ್ಯಮ್ಮನವರು ಪಾರ್ವತಮ್ಮನವರ ಮಗಳು. ಸೌಬ್ಯಾಗ್ಯಮ್ಮ ನನ್ನ ತಮ್ಮನ ಹೆಂಡತಿ. ಪಾರ್ವತಮ್ಮನವರ ಆಸ್ತಿ ದಾಖಲೆ ನೋಡಿದ್ದೇನೆ. ಅದರೆ ಸೌಬ್ಯಾಗ್ಯಮ್ಮನವರ ಆಸ್ತಿ ದಾಖಲೆಗಳನ್ನು ನೋಡಿಲ್ಲ. ನಾನು ಪ್ರತಿವಾದಿಗಳ ತಕರಾರಿನ ವಿಚಾರ ತಿಳಿದುಕೊಂಡಿಲ್ಲ. ಪಾರ್ವತಮ್ಮನವರ ಕ್ರಯ ಪತ್ರದ ಕಾಲಕ್ಕೆ ನಾನು ನೊಂದಣಾದಿಕಾರಿ ಕಚೇರಿಯಲ್ಲಿ ಹಾಜರಿದ್ದೆ. ಆ ಕಾಲಕ್ಕೆ ನನ್ನ ಅತ್ತೆ ಮಾತ್ರ ಬಂದಿದ್ದರು ನಾನು ಬಂದಿರಲಿಲ್ಲ. ಆದ್ದರಿಂದ ಕ್ರಯಪತ್ರದಲ್ಲಿ ಕಾಲದಲ್ಲಿ ನಡೆದ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ.

7. ಸೌಬ್ಯಾಗ್ಯಮ್ಮನವರ ಹೆಸರಿಗಾದ ಖರೀದಿ ಪತ್ರ 1978 ರಲ್ಲಾಗಿತ್ತು. ಪಾರ್ವತಮ್ಮ ಪತ್ರದ ಪೂರ್ವದಲ್ಲಿಯೇ ಸೌಬ್ಯಾಗ್ಯಮ್ಮನವರ ಪತ್ರ 1973 ರಲ್ಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪಾರ್ವತಮ್ಮ

ಮತ್ತು ಸೌಭಾಗ್ಯಮ್ಮನವರ ಸಾಕ್ಷಿ ಮಾಡದೇ ಸುಳ್ಳು ಅಧಿಕಾರ ಪತ್ರದಿಂದ ನನ್ನ ಸಾಕ್ಷ್ಯವನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಮೂಲ ಮಾಲೀಕರು ದಿಃ 14.08.1967 ರಲ್ಲಿ ಸರ್ವೆ ನಂ. 94 ರ ಜಮೀನನ್ನು ಖರೀದಿಸಿದ ವಿಚಾರ ನನಗೆ ಗೊತ್ತಿಲ್ಲ. ಮಂಟರಘಟ್ಟದ ರೇವಣಸಿದ್ದಪ್ಪನವರ ಪರಿಚಯವಿಲ್ಲ. ಅವರ ಮಗ ದಿಃ 14.08.1967 ರಂದು ಸಣ್ಣಿಗೆರೆಯ ಮಲ್ಲಪ್ಪ ಮತ್ತು ಹನುಮಪ್ಪನವರಿಂದ ಸರ್ವೆ ನಂ. 94 ರಲ್ಲಿ 4 ಎಕರೆ 37 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

8. ಸದರಿ ಜಮೀನಿನಲ್ಲಿ 2 ಎಕರೆ ಜಮೀನು ಸೌಭಾಗ್ಯಮ್ಮನವರಿಗೆ 1972-73 ರಲ್ಲಿ ಮಾರಾಟ ಮಾಡಲಾಗಿದೆ ಎಂದರೆ ಗೊತ್ತಿಲ್ಲ. 1974 ರ ನಂತರ ರೇವಣಸಿದ್ದಪ್ಪನವರಿಗೆ ಸರ್ವೆ ನಂ. 94 ರಲ್ಲಿ ಕೇವಲ 2 ಎಕರೆ 37 ಗುಂಟೆ ಜಮೀನು ಮಾತ್ರ ಉಳಿದಿತ್ತು ಎಂದರೆ ಸರಿಯಲ್ಲ. ರೇವಣಸಿದ್ದಪ್ಪನವರು ಅನಕ್ಷರಸ್ಥರಾಗಿದ್ದರು ಎಂದರೆ ಸರಿಯಲ್ಲ. ದಿಃ 15.03.1978 ರಂದು ರೇವಣಸಿದ್ದಪ್ಪನವರಿಗೆ ಮತ್ತು ಅವರ ಕುಟುಂಬಕ್ಕೆ ಸರ್ವೆ ನಂ. 94 ರಲ್ಲಿ 4 ಎಕರೆ 37 ಗುಂಟೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ರೇವಣಸಿದ್ದಪ್ಪನವರಿಗೆ 4 ಎಕರೆ 37 ಗುಂಟೆ ಆಸ್ತಿ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ನಮಗೆ ರೇವಣಸಿದ್ದಪ್ಪ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ.

9. ಬಸವರಾಜಪ್ಪನವರ ತಂದೆ ಹೆಸರು ರೇವಣಸಿದ್ದಪ್ಪ ಆತನಿಂದ ನಾವು ಜಮೀನು ಖರೀದಿಸಿರುತ್ತೇವೆ. ಬಸವರಾಜಪ್ಪನವರಿಗೆ ನಮಗೆ ಖರೀದಿ ಕೊಡುವ ಕಾಲಕ್ಕೆ 4 ಎಕರೆ 30 ಗುಂಟೆ ಜಮೀನಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆ ಕುರಿತು ಕ್ರಯಪತ್ರ ನೋಡಿಲ್ಲ ಆದರೆ ಖಾತೆ ಪಹಣಿ ನೋಡಿರುತ್ತೇನೆ. ಖಾತೆ ಪಹಣಿ ಆದಾರದಲ್ಲಿ ನಾವು ಆಸ್ತಿಯನ್ನು ಖರೀದಿಸಿರುತ್ತೇವೆ. ನಾವು ಕ್ರಯಪತ್ರವನ್ನು ಸಹ ನೋಡಿರುತ್ತೇವೆ. ಬಸವರಾಜಪ್ಪ ತನ್ನ ತಂದೆಯಿಂದ ವಿಬಾಗ ಮಾಡಿಕೊಂಡಿದ್ದ. ಆ ರೀತಿ ವಿಬಾಗವನ್ನು 1978 ರಿಂದ 4 ವರ್ಷಗಳ ಮೊದಲೇ ಮಾಡಿಕೊಂಡಿದ್ದರು. ಆ ವಿಬಾಗಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಆ ವಿಬಾಗ ಪತ್ರ ನಮ್ಮ ಬಳಿಯಿದೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ.



10. 19732 ರಲ್ಲಿ 2 ಎಕರೆ ಜಮೀನು ಸೌಭಾಗ್ಯಮ್ಮನವರಿಗೆ ಮಾರಾಟವಾದರು ಸಹ ಆಕೆ ಹೆಸರಿನಲ್ಲಿ ಖಾತೆ ಮತ್ತು ಪಹಣಿಗಳು ಬದಲಾವಣೆಯಾಗಿರಲಿಲ್ಲ ಎಂದರೆ ಸರಿಯಲ್ಲ. ನಮಗೆ

ಖರೀದಿಕೊಡುವ ಕಾಲಕ್ಕೆ ಬಸವರಾಜಪ್ಪನವರಿಗೆ ಮತ್ತು ಅವರ ಕುಟುಂಬದವರಿಗೆ ಕ್ರಯಪತ್ರದಲ್ಲಿ ಕಾಣಿಸಿರುವ ವಿಸ್ತೀರ್ಣದ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು ಬಸವರಾಜಪ್ಪ ಸೇರಿ ಷರೀಕ್ ಆಗಿ ಸುಳ್ಳು ಕ್ರಯಪತ್ರವನ್ನು 4 ಎಕರೆ 30 ಗುಂಟೆಗೆ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಖೊಟ್ಟಿ ಕ್ರಯಪತ್ರ ಆದಾರದಲ್ಲಿ ಖಾತೆ ಮತ್ತು ಪಹಣಿಗಳನ್ನು ನಮ್ಮ ಹೆಸರಿನಲ್ಲಿ ಬದಲಾಯಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿಗೆ 1985-86 ನೇ ಸಾಲಿನ ಪಹಣಿ ನಕಲನ್ನು ತೋರಿಸಿ ಅದು ರೇವಣಸಿದ್ದಪ್ಪ ಬಿನ್ ಆನೇಪ್ಪ ನವರ ಹೆಸರಿನಲ್ಲಿರುವ ಬಗ್ಗೆ ಕೇಳಲಾಗಿ ಸಾಕ್ಷಿ ಅದು ಸುಳ್ಳು ದಾಖಲೆ ಎಂದು ನುಡಿಯುತ್ತಾರೆ.

11. 1997-98 ರಲ್ಲಿ ನನ್ನ ಅತ್ತೆ ಹೆಸರಿನಲ್ಲಿ ಖಾತೆಯಾಗಿರುತ್ತದೆ. ಸಾಕ್ಷಿ ಮುಂದುವರೆದು ನಮ್ಮ ಅತ್ತೆ ಅವಿದ್ಯಾವಂತರಾದ್ದರಿಂದ ಖಾತೆ ಬದಲಾಯಿಸಿಕೊಂಡಿರಲಿಲ್ಲ ನಂತರ ನನ್ನ ಗಂಡ ಖಾತೆಯನ್ನು ಬದಲಾಯಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. 1997-98 ರವರೆಗೆ 1978 ರ ಕ್ರಯಪತ್ರದ ಆದಾರದಲ್ಲಿ ಖಾತೆ ಪಹಣಿ ಆಗಿರುವುದಿಲ್ಲ. ಈ ವಿಚಾರಗಳನ್ನು ವಾದ ಪತ್ರದಲ್ಲಿ ಉಲ್ಲೇಖಿಸಿರುವುದಿಲ್ಲ. ಪಾರ್ವತಮ್ಮನವರಿಗೆ 6 ಜನ ಮಕ್ಕಳು. ಪಾರ್ವತಮ್ಮನವರು ತನ್ನ ಮಕ್ಕಳ ಹೆಸರಿಗೆ ಯಾವುದೆ ದಾಖಲೆಯನ್ನು ಸರ್ವೆ ನಂ. 94 ರ ಕುರಿತು ಬರೆದುಕೊಟ್ಟಿಲ್ಲ. ನನ್ನ ಗಂಡ ಹಿರಿಮಗನಾದ್ದರಿಂದ ಖಾತೆಯನ್ನು ಆತನ ಹೆಸರಿಗೆ ಬದಲಾಯಿಸಿಕೊಳ್ಳಲಾಗಿರುತ್ತದೆ. ಆ ಕುರಿತು ದಾಖಲೆಯಿದೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

12. ಪಾರ್ವತಮ್ಮನವರಿಗೆ 3 ಜನ ಹೆಣ್ಣುಮಕ್ಕಳು 3 ಜನ ಗಂಡು ಮಕ್ಕಳು. ಈ ಪ್ರಕರಣ ದಾಖಲಿಸಲು ನನ್ನ ಗಂಡನ ಸಹೋದರ ಸಹೋರಿಯವರು ಅದಿಕಾರ ಪತ್ರವನ್ನು ನನಗೆ ಬರೆದುಕೊಟ್ಟಿರುವುದಿಲ್ಲ. ನನ್ನ ಗಂಡ ಮತ್ತು ಆತನ ಸಹೋದರರು ಬೇರೆಯಾಗಿ 38 ವರ್ಷಗಳಾಗಿವೆ. ಆ ವಿಬಾಗದಲ್ಲಿ ದಾವಾ ಸ್ವತ್ತನ್ನು ಯಾರ ಪಾಲಿಗೂ ಕೊಟ್ಟಿರುವುದಿಲ್ಲ. ಸಾಕ್ಷಿ ಮತ್ತೊಮ್ಮೆ ಆ ವಿಬಾಗ ಪತ್ರದಲ್ಲಿ ದಾವಾ ಸ್ವತ್ತನ್ನು ನನ್ನ ಗಂಡನ ಪಾಲಿಗೆ ತೋರಿಸಿದ್ದಾರೆಂದು ನುಡಿಯುತ್ತಾರೆ. ಆ ದಾಖಲೆಯಿದ್ದು ಅದನ್ನು



ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ. ಬಸವರಾಜಪ್ಪ ಮತ್ತು ಆತನ ಸಹೋದರ ವಿಬಾಗದ ವಿಚಾರ ಮತ್ತು ನನ್ನ ಗಂಡ ಮತ್ತು ಸಹೋದರ ಮತ್ತು ಸಹೋದರಿಯರ ವಿಬಾಗದ ವಿಚಾರಗಳನ್ನು ವಾದ ಪತ್ರದಲ್ಲಿ ಉಲ್ಲೇಖಿಸಿಲ್ಲ. ಪಾಲು ವಿಬಾಗ ಪತ್ರದಂತೆ ನನ್ನ ಗಂಡನ ಹೆಸರಿಗೆ ಕಂದಾಯ ದಾಖಲೆಗಳಾಗಿಲ್ಲ ಎಂದರೆ ಸರಿಯಲ್ಲ.

13. ವಿಭಾಗ ಪತ್ರದಂತೆ 1997-98 ರಲ್ಲಿ ನನ್ನ ಗಂಡನ ಹೆಸರಿಗೆ ಖಾತೆಯಾಗಿದೆ. ಕೆಂಚಮ್ಮ ಬಸವರಾಜಪ್ಪನವರ ತಾಯಿ. ನಿಪಿ 3 ಸುಳ್ಳು ದಾಖಲೆಯಾಗಿದೆ. ನಿಪಿ 3 ನ್ನು ನಾವು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಪಿ 4 ನ್ನು ನಾವೇ ಹಾಜರುಪಡಿಸಿರುತ್ತೇವೆ. ಮಂಜಪ್ಪ ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿದರೆ ನಿಜ ಸಂಗತಿ ತಿಳಿಯುತ್ತದೆಂದು ನಾನು ಸುಳ್ಳು ಅದಿಕಾರ ಪತ್ರ ಪಡೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ದಾಖಲೆಗಳ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಉಳಿದ 2 ಎಕರೆ 30 ಗುಂಟೆ ಬ್ಯಾಂಕ್ ಗೆ ಆದಾರ ಮಾಡಿ ಸಾಲ ಪಡೆದಿದ್ದು ಇನ್ನು ಬಾಕಿ ಉಳಿದಿದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮಾಹಿತಿ ನನಗಿದೆ. ಸದರಿ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನನ್ನ ಗಂಡ ಹೇಳಿ ಬರೆಸಿರುತ್ತಾರೆ. ಅದನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಾವು 1978 ರಲ್ಲಾಗಲೀ ದಾವೆ ಸಲ್ಲಿಸುವ ಕಾಲಕ್ಕಾಗಲಿ ದಾವಾ ಸ್ವತ್ತಿನ ಒಟ್ಟು 4 ಎಕರೆ 30 ಗುಂಟೆ ಕ್ಷೇತ್ರದಲ್ಲಿ ಸ್ವಾದೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

14. ಸರ್ವೆ ನಂ. 94 ರಲ್ಲಿ ಪ್ರತಿವಾದಿ ಸ್ವಾದೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಅವರ ಸ್ವಾದೀನದ ಬಗ್ಗೆ ಸಾಕ್ಷಿ ಮಾಡಿಸುತ್ತೇನೆ. ಅವರ ಅಕ್ಕಪಕ್ಕದ ಜಮೀನಿನ ಸಾಗುವಳಿದಾರರ ಬಗ್ಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವದಲ್ಲಿ ಬಸವಪ್ಪನವರಿದ್ದರು ಈಗ ಅಶೋಕ ಪಶ್ಚಿಮಕ್ಕ ಆಲೂರು ರುದ್ರಪ್ಪ, ಉತ್ತರಕ್ಕೆ ಸೌಬಾಗ್ಯಮ್ಮ ಈಗ ಯಲ್ಲಮ್ಮ ದಕ್ಷಿಣಕ್ಕೆ ಕೆ ಬಸಪ್ಪ ಮತ್ತು ಅವರ ಮಕ್ಕಳಿದ್ದಾರೆ. ಉತ್ತರದಲ್ಲಿರುವ ಸೌಬಾಗ್ಯಮ್ಮ ಪಾರ್ವತಮ್ಮನವರ ಮಗಳು. ಆಕೆ ಆಸ್ತಿಯನ್ನು ಮಾರಾಟ ಮಾಡಿದ್ದು ಈಗ ಯಲ್ಲಮ್ಮ ಸಾಗು ಮಾಡುತ್ತಿದ್ದಾರೆ. ಸೌಬಾಗ್ಯಮ್ಮ ತನ್ನ ಆಸ್ತಿಯಲ್ಲಿ ಯಲ್ಲಮ್ಮ ಮತ್ತು ನೇತ್ರಮ್ಮನವರಿಗೆ ಮಾರಾಟ ಮಾಡಿದ್ದಾರೆ ದಿನಾಂಕ ನನಗೆ ಗೊತ್ತಿಲ್ಲ. ಆ ಮಾರಾಟದ ನಂತರ ನನ್ನ ಗಂಡನಿಗಾಗಲೀ ಅವರ ಕುಟುಂಬಕ್ಕಾಗಲೀ ಸರ್ವೆ

ನಂ. 94/1 ರಲ್ಲಿ 4 ಎಕರೆ 30 ಗುಂಟೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಕಂದಾಯ ದಾಖಲಾತಿಗಳ ಆದಾರದಲ್ಲಿ ಈ ದಾವೆಯನ್ನು ನಾವು ಸಲ್ಲಿಸಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕ್ರಯಪತ್ರದ ಮೇಲೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ.

15. ಸರ್ವೆ ನಂ.94 ರಲ್ಲಿ 4 ಎಕರೆ 30 ಗುಂಟೆ ರೇವಣಸಿದ್ದಪ್ಪ, ಬಸವರಾಜಪ್ಪ, ಪಾರ್ವತಮ್ಮ ಮತ್ತು ನನ್ನ ಗಂಡ 1973 ರ ನಂತರ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ನಿಜ ಸಂಗತಿ ನಮ್ಮ ಗಮನದಲ್ಲಿದ್ದರು ಸಹ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಹಳೆ ವಿಚಾರಗಳನ್ನು ಬರೆಸಿಲ್ಲ ಎಂದು ನುಡಿಯುತ್ತಾರೆ. ಪಹಣಿ ವಿಚಾರಗಳನ್ನು ಮಾತ್ರ ಬರೆಸಿದ್ದೇವೆ. ದಾವಾ ಸ್ವತ್ತಿನ 4 ಎಕರೆ 30 ಗುಂಟೆ ಸ್ವಾದೀನದಲ್ಲಿ ನಾವು ಯಾವತ್ತು ಇಲ್ಲ ಎಂದರೆ ಸರಿಯಲ್ಲ. 1978 ರಿಂದ 4 ಎಕರೆ 30 ಗುಂಟೆ ಜಮೀನಿಗೆ ಕಂದಾಯ ಕಟ್ಟಿದ ದಾಖಲೆಗಳು ನಮ್ಮ ಮನೆಯಲ್ಲಿವೆ ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಆ ಬಗ್ಗೆ ತೊಂದರೆ ಇಲ್ಲ. 1978 ರಿಂದ 1998 ರವರೆಗೆ ಖಾತೆ ಕಂದಾಯ ನಮ್ಮ ಅತ್ತೆ ಹೆಸರಿಗೆ ಆಗದ ಕಾರಣ ನಾವು ಬಿಡಿಗಾಸು ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ. 1978 ರಿಂದ 1998 ರವರೆಗೆ ಯಾರ ಹೆಸರಿನಿಂದ ಕಂದಾಯ ಕಟ್ಟಿದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ 1998 ರ ನಂತರ ನಾವು ಕಂದಾಯ ಕಟ್ಟಿದ್ದೇವೆಂದು ಸಾಕ್ಷಿ ನುಡಿಯುುತ್ತಾರೆ.

16. 1998 ರ ನಂತರ ವಾದಿ ಹೆಸರಿಗೆ ಕಂದಾಯವನ್ನು 4 ಎಕರೆ 30 ಗುಂಟೆ ಜಮೀನಿಗೆ ಕಟ್ಟಿರುತ್ತೇವೆ. ಆ ರಶೀದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ. ಸಾಕ್ಷಿಗೆ ನಿಪಿ 1 ರಿಂದ 5 ರಲ್ಲಿನ ದಾಖಲೆಗಳನ್ನು ತೋರಿಸಿ ಅದರಲ್ಲಿ ರಶೀದಿಗಳಿಲ್ಲ ಎಂದರೆ ಸಾಕ್ಷಿ ಇರುತ್ತವೆ ಎಂದು ನುಡಿಯುತ್ತಾರೆ. ನಾನು ಕಂದಾಯ ಕಟ್ಟದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯ 2 ಎಕರೆ ಜಮೀನನ್ನು ಸೇರಿಸಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.